**SL. No. : OP**

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 96-K** **Code No. : 96-K**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 17. 06. 2017 ] [ Date : 17. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. 'ಒಂದು ರಾಷ್ಟ್ರವು ಬಡ ರಾಷ್ಟ್ರವಾಗಿರುವುದಕ್ಕೆ ಕಾರಣ ಬಡತನವಾಗಿದೆ' ಈ ವ್ಯಾಖ್ಯೆಯನ್ನು ನೀಡಿದವರು

   (A) ರ್‍ಯಾಗ್ನರ್‌ರಿಗ್ಸ್

   (B) ಆಡಂ ಸ್ಮಿತ್

   (C) ಕೇನ್ಸ್

   (D) ಮಾರ್ಷಲ್

2. ಎಲ್ಲಾ ಸ್ಥಳಗಳಲ್ಲಿ ನಿರಂತರವಾಗಿ ಲಭ್ಯವಿರುವ ಸಂಪನ್ಮೂಲವೆಂದರೆ

   (A) ವಾಯು

   (B) ಖನಿಜ

   (C) ಪೆಟ್ರೋಲಿಯಂ

   (D) ಕಲ್ಲಿದ್ದಲು

3. ಅತೀ ಹೆಚ್ಚು ಕಾರ್ಬನ್ ಅಂಶ ಹೊಂದಿರುವ ಕಲ್ಲಿದ್ದಲಿನ ವಿಧವು

   (A) ಆಂಥ್ರಸೈಟ್

   (B) ಬಿಟುಮಿನಸ್

   (C) ಲಿಗ್ನೈಟ್

   (D) ಪೀಟ್

4. ಅತೀ ಹೆಚ್ಚು ಚಿನ್ನವನ್ನು ಉತ್ಪಾದಿಸುವ ರಾಜ್ಯ

   (A) ತಮಿಳುನಾಡು

   (B) ಕರ್ನಾಟಕ

   (C) ಮಧ್ಯಪ್ರದೇಶ

   (D) ಆಂಧ್ರಪ್ರದೇಶ

5. ಬ್ರಿಟಿಷರ ಕಾಲದಲ್ಲಿ ರೈತರೇ ನೇರವಾಗಿ ಕಂದಾಯವನ್ನು ಸರ್ಕಾರಕ್ಕೆ ಕಟ್ಟುತ್ತಿದ್ದ ಪದ್ಧತಿಯೇ

(A) ರೈತವಾರಿ

(B) ಮಹಲ್ವಾರಿ

(C) ಜಮೀನ್ದಾರಿ

(D) ಜಹಗೀರ್‌ದಾರಿ

6. ಭಾರತೀಯ ಸ್ಟೇಟ್ ಬ್ಯಾಂಕ್‌ನ್ನು ರಾಷ್ಟ್ರೀಕರಣಗೊಳಿಸಿದ ವರ್ಷ

(A) 1955

(B) 1965

(C) 1975

(D) 1985

7. ಸೇವಾ ವಲಯದಲ್ಲಿ ಸಣ್ಣ ಕೈಗಾರಿಕೆಗಳ ಹೂಡಿಕೆ ಮಿತಿ

(A) 25 ಲಕ್ಷ ಕೋಟಿ ರೂಪಾಯಿಗಳವರೆಗೆ

(B) 10 ಲಕ್ಷ ಕೋಟಿ ರೂಪಾಯಿಗಳವರೆಗೆ

(C) 5 ಕೋಟಿ ರೂಪಾಯಿಗಳವರೆಗೆ

(D) 2 ಕೋಟಿ ರೂಪಾಯಿಗಳವರೆಗೆ

8. ಸುರೇಶ್ ತೆಂಡೂಲ್ಕರ್‌ರವರು ಬಡತನವನ್ನು ಅಳೆಯಲು ಬಳಸಿದ ಮಾನದಂಡ

(A) ತಲಾ ಅನುಭೋಗ ವೆಚ್ಚ

(B) ತಲಾ ಆದಾಯ

(C) ಪ್ರತಿದಿನ ಸೇವಿಸುವ ಒಟ್ಟು ಕ್ಯಾಲರಿಗಳು

(D) ಶಿಕ್ಷಣ ಮತ್ತು ಆರೋಗ್ಯಕ್ಕೆ ಮೀಸಲಿಟ್ಟ ವೆಚ್ಚ

9. ಜಗತ್ತಿನ ಅತೀ ದೊಡ್ಡ ರೈಲ್ವೆ ವ್ಯವಸ್ಥೆ ಹೊಂದಿರುವ ದೇಶ

(A) ಅಮೆರಿಕಾ

(B) ರಷ್ಯಾ

(C) ಚೀನಾ

(D) ಭಾರತ

10. ಭಾರತೀಯ ಅಂಚೆ ಸೇವೆಯು

(A) ಸಾರ್ವಜನಿಕ ಸಂಸ್ಥೆಯಾಗಿದೆ

(B) ಖಾಸಗಿ ಸಂಸ್ಥೆಯಾಗಿದೆ

(C) ಸ್ವಾಯತ್ತ ಸಂಸ್ಥೆಯಾಗಿದೆ

(D) ಸಾರ್ವಜನಿಕ–ಖಾಸಗಿ ಸಂಸ್ಥೆಯಾಗಿದೆ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಆರ್ಥಿಕ ಅಭಿವೃದ್ಧಿ ಎಂದರೇನು ?

12. ಅತ್ಯಂತ ಹೆಚ್ಚು ತಲಾದಾಯವನ್ನು ಹೊಂದಿರುವ ದೇಶ ಯಾವುದು ?

13. ಪವನ ಶಕ್ತಿ ಎಂದರೇನು ?

14. ಮಾನವ ಸಂಪನ್ಮೂಲ ಎಂದರೇನು ?

15. ಹಸಿರು ಕ್ರಾಂತಿಯ ಪಿತಾಮಹ ಯಾರು ?

16. ಬ್ಯಾಂಕುಗಳ ಬ್ಯಾಂಕು ಯಾವುದು ?

17. ಯಾವುದಾದರೂ ಎರಡು ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ತಿಳಿಸಿ.

18. ಅಲ್ಯೂಮಿನಿಯಂನ ಅದಿರು ಯಾವುದು ?

19. ಭಾರತದಲ್ಲೇ ಅತ್ಯಂತ ಕಡಿಮೆ ಜನಸಾಂದ್ರತೆಯುಳ್ಳ ರಾಜ್ಯ ಯಾವುದು ?

20. ತೀವ್ರ ಜನಸಂಖ್ಯಾ ಏರಿಕೆಗೆ ಪ್ರಮುಖ ಕಾರಣವೇನು ?

21. ಪೆಟ್ರೋಲಿಯಂ ಅನ್ನು ಊರ್ಧ್ವಪಾಶ ಪ್ರಕ್ರಿಯೆಯ ಮೂಲಕ ಶುದ್ಧೀಕರಿಸಲಾಗುತದೆ. ಏಕೆ ?

22. ಹಿಂದ್ ಮಜ್ದೂರ್ ಸಭಾವನ್ನು ಯಾವ ರಾಜಕೀಯ ಪಕ್ಷದ ನಿಯಂತ್ರಣದಲ್ಲಿದೆ ?

23. ಸಂಘಟಿತ ಕಾರ್ಮಿಕರು ಎಂದರೆ ಯಾರು ?

24. ಬಡತನ ರೇಖೆ ಎಂದರೇನು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. ನೈಸರ್ಗಿಕ ಸಂಪನ್ಮೂಲಗಳ ವಿಧಗಳಾವುವು ?

26. ವಿವಿಧ ಜಲಸಂಪನ್ಮೂಲಗಳ ಮೂಲಗಳನ್ನು ತಿಳಿಸಿ.

27. ಭಾರತದಲ್ಲಿ ಜನಸಂಖ್ಯಾಭಿವೃದ್ಧಿಗೆ ಕಾರಣವಾಗುವ ಸಾಮಾಜಿಕ ಅಂಶಗಳಾವುವು ?

28. ಜನಸಂಖ್ಯಾ ಏರಿಕೆಗೆ ಕಾರಣವಾಗುವ ಆರ್ಥಿಕ ಅಂಶಗಳಾವುವು ?

29. ರೈತವಾರಿ ಪದ್ಧತಿಯನ್ನು ವಿವರಿಸಿ.

30. ಭಾರತದಲ್ಲಿ ಬಳಕೆಯಲ್ಲಿರುವ ಪ್ರಮುಖ ನೀರಾವರಿ ಪದ್ಧತಿಗಳಾವುವು ?

31. ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್‌ಗಳಿದ್ದರೂ ಲೇವಾದೇವಿಗಾರರು ಪ್ರಮುಖ ಪಾತ್ರವಹಿಸುತ್ತಾರೆ. ಏಕೆ ?

32. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಪ್ರಮುಖ ಉದ್ದೇಶಗಳೇನು ?

33. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪ್ರಮುಖ ಕಾರ್ಯಗಳೇನು ?

34. ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ಎಂದರೆ ಯಾರು ?

35. ಕಾರ್ಮಿಕ ನೀತಿಯ ಎರಡು ಉದ್ದೇಶಗಳನ್ನು ತಿಳಿಸಿ.

36. ಬಡತನದ ವಿಧಗಳಾವುವು ?

37. ಜಲಸಾರಿಗೆಯ ವಿಧಗಳಾವುವು ?

38. ಅಂಚೆ ಕಚೇರಿಗಳು ನೀಡುವ ಸೇವೆಗಳಾವುವು ?

39. ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳನ್ನು ಹೆಸರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪ್ರಮುಖ ಲಕ್ಷಣಗಳೇನು ?

***ಅಥವಾ***

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪ್ರಮುಖ ಲಕ್ಷಣಗಳೇನು ?

41. ಭೂ ಸವೆತಕ್ಕೆ ಕಾರಣಗಳನ್ನು ತಿಳಿಸಿ.

***ಅಥವಾ***

ಭೂ ಸಂರಕ್ಷಣೆಯ ಕ್ರಮಗಳನ್ನು ತಿಳಿಸಿ.

42. ಭೂ ಸುಧಾರಣೆಯ ಮಹತ್ವವನ್ನು ತಿಳಿಸಿ.

***ಅಥವಾ***

ಭೂ ಸುಧಾರಣೆಯ ವಿಫಲತೆಗೆ ಕಾರಣಗಳೇನು ?

43. ಹನಿ ನೀರಾವರಿಯ ಪ್ರಮುಖ ಪ್ರಯೋಜನಗಳೇನು ?

***ಅಥವಾ***

ಹಸಿರು ಕ್ರಾಂತಿಯ ದುಷ್ಪರಿಣಾಮಗಳೇನು ?

44. ಕೈಗಾರಿಕಾ ಕಾರ್ಮಿಕರ ಲಕ್ಷಣಗಳಾವುವು ?

***ಅಥವಾ***

ಕೃಷಿ ಕಾರ್ಮಿಕರ ಲಕ್ಷಣಗಳಾವುವು ?

45. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಸಂಪರ್ಕದ ಪಾತ್ರವೇನು ?

***ಅಥವಾ***

ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಸಾರಿಗೆಯ ಪಾತ್ರವೇನು ?

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಆರ್ಥಿಕಾಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರವನ್ನು ತಿಳಿಸಿ.

47. ಸಣ್ಣ ಪ್ರಮಾಣದ ಕೈಗಾರಿಕೆಗಳು ಎದುರಿಸುವ ಸಮಸ್ಯೆಗಳೇನು ?